2

# ಮರಣದಲ್ಲಿ ಏನು ಸಂಭವಿಸುವುದು?

*"ಮಣ್ಣು ಭೂಮಿಗೆ ಸೇರಿ ಇದ್ದ ಹಾಗಾಗುವದು; ಆತ್ಮವು ತನ್ನನ್ನು ದಯಪಾಲಿಸಿದ ದೇವರ ಬಳಿಗೆ ಸೇರುವುದು" (ಪ್ರಸಂಗಿ 12:7).*

ಒಬ್ಬ ವ್ಯಕ್ತಿಯು ಸಾಯುವಾಗ ದೇಹಕ್ಕೆ, ಪ್ರಾಣಕ್ಕೆ ಮತ್ತು ಆತ್ಮಕ್ಕೆ ಏನು ಸಂಭವಿಸುವುದು? ದೇಹವು ಸತ್ತ ಮೇಲೆ ಪ್ರಾಣ ಮತ್ತು ಆತ್ಮ ಅಸ್ತಿತ್ವದಲ್ಲಿರುವವೋ? ಮರಣಾನಂತರ ಜೀವಿಸುವದರಲ್ಲಿ ಏನಾದರೂ ಅರ್ಥವಿರುವುದೋ? "ಆತ್ಮವಿಲ್ಲದ ದೇಹವು ಸತ್ತದ್ದಾಗಿದೆ" (ಯಾಕೋಬ 2:26) ಎಂದು ಬೈಬಲ್ ಹೇಳಿದರೂ ದೇಹ ವಿಲ್ಲದೇ ಆತ್ಮವು ಸತ್ತದ್ದಾಗಿರುವುದೆಂದು ಹೇಳಿರುವದಿಲ್ಲ. ಮರಣದ ನಂತರ ನಮಗೆ ಜೀವವಿರುವುದು ಎಂದು ಯೇಸು ಸೂಚಿಸಿದ್ದಾನೆ: "ಸತ್ತವರ ಪುನರುತ್ಥಾನದ ವಿಷಯ ವಾಗಿ ಹೇಳಬೇಕಾದರೆ - ನಾನು ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನ ದೇವರು ಎಂದು ದೇವರು ನಮಗೆ ನುಡಿದದ್ದನ್ನು ನೀವು ಓದಲಿಲ್ಲವೇ. ಆತನು ಜೀವಿತರಿಗೆ ದೇವರಾಗಿದ್ದಾನೆ ಹೊರತು ಜೀವವಿಲ್ಲದವರಿಗೆ ಅಲ್ಲ ಎಂದು ಹೇಳಿದನು" (ಮತ್ತಾಯ 22:31, 32). ದೇವರು ಪಿತೃಗಳ ದೇವರು ಆಗಿದ್ದರೆ ಹಾಗೂ ಸತ್ತವರ ದೇವರಾಗಿರದೇ ಜೀವಿತರ ದೇವರಾಗಿದ್ದರೆ, ಆಗ ಒಂದು ಅರ್ಥದಲ್ಲಿ ಈ ಬೈಬಲಿನ ವ್ಯಕ್ತಿಗಳು ಮರಣಾನಂತರ ಜೀವಿತರಾಗಿದ್ದರು.

ಬಹಳ ಸಮಯದ ಮೊದಲೇ ಸತ್ತು ಹೋಗಿದ್ದರೂ, ಮೋಶೆಯ ಮತ್ತು ಎಲೀಯರು ರೂಪಾಂತರದ ಬೆಟ್ಟದಲ್ಲಿ ಯೇಸುವಿಗೆ ಕಂಡುಕೊಂಡರು (ಮತ್ತಾಯ 17:1-4). ಅಬ್ರಹಾಮ, ಲಾಜರ ಮತ್ತು ಐಶ್ವರ್ಯವಂತನಿಗೆ ಮರಣದ ನಂತರವೂ ಜೀವ ಮತ್ತು ಅರುಹು ಇತ್ತೆಂದು ಲೂಕ 16:19-30ರಲ್ಲಿ ಯೇಸು ತೋರಿಸಿದ್ದಾನೆ. ಪೌಲನು ಮೂರನೆಯ ಆಕಾಶದ ಪರಿಯಂತರಕ್ಕೆ ಒಯ್ಯಲ್ಪಟ್ಟಾಗ ಅವನು ದೇಹದ ಹೊರಗಿದ್ದವನಾಗಿರಬಹುದು (2 ಕೊರಿಂಥ 12:2-4), ಇದರ ಅರ್ಥ ನಮ್ಮ ದೇಹದ ಹೊರಗೆ ಅಸ್ತಿತ್ವದಲ್ಲಿರ ಬಹುದು ಎಂದಾಗುತ್ತದೆ. "ದೇಹವನ್ನು ಬಿಟ್ಟು ಹೊರಗಿರಲು ಬಯಸುತ್ತೇನೆ" (2 ಕೊರಿಂಥ 5:8) ಎಂದು ಪೌಲನು ಬರೆದನು. ನಮ್ಮ ದೇಹಗಳ ಹೊರಗೆ ಜೀವಿಸಬಹುದು ಎಂಬುದನ್ನು ಇದು ಸೂಚಿಸುತ್ತದೆ.

## ಮರಣ ಮತ್ತು ಭೌತಿಕ ದೇಹ

ಗರ್ಭೋತ್ಪತ್ತಿಯ ಕಾಲದಲ್ಲಿ, ದೇವರು ನಮ್ಮ ದೇಹಗಳಲ್ಲಿ ನಮ್ಮ ಆತ್ಮಗಳನ್ನು ಇಡುವನು (ಪ್ರಸಂಗಿ 12:7; ಜೆಕರ್ಯ 12:1). ಭೌತಿಕ ದೇಹದೊಂದಿಗೆ ಆತ್ಮವು ಒಂದಾಗಿ ಕೊಡಲ್ಪಡುವುದು ದೇಹಕ್ಕೆ ಜೀವವನ್ನು ಕೊಡುತ್ತದೆ. ಪ್ರಾಣ ಮತ್ತು ಆತ್ಮ ದೇಹದಲ್ಲಿ ಇರುವವರೆಗೆ, ಅದಕ್ಕೆ ಜೀವವಿರುತ್ತದೆ (1 ಅರಸು 17:21, 22; ಯಾಕೋಬ 2:26).

ಮರಣವು ದೇಹದ ಅಸ್ತಿತ್ವವನ್ನು ಅಂತ್ಯಗೊಳಿಸುವದಿಲ್ಲ, ಆದರೆ ದೇಹದ

ಜೀವವನ್ನು ಅಂತ್ಯಗೊಳಿಸುತ್ತದೆ. ಸುಗಂಧತುಂಬಿಸದಿದ್ದರೆ, ಮರಣದಲ್ಲಿ ದೇಹವು ಕೊಳೆಯಲು ಪ್ರಾರಂಭಿಸುತ್ತದೆ ಮತ್ತು ಅಂತಿಮವಾಗಿ ಮಣ್ಣಿಗೆ ಹಿಂದಿರುಗಿ ಹೋಗುತ್ತದೆ (ಆದಿಕಾಂಡ 3:19; ಪ್ರಸಂಗಿ 12:7). ಜೀವವು ಒಬ್ಬನ ದೇಹಕ್ಕೆ ಅದರ ದೈಹಿಕ ಬಲವನ್ನೂ ಶಾರೀರಿಕ ಚಟುವಟಿಕೆಗಳನ್ನೂ ಕೊಡುತ್ತದೆ. ದೈಹಿಕ ಮರಣವು ಶರೀರವು ಮಾಡಲು ಶಕ್ತವಾದ ಪ್ರತಿಯೊಂದು ಆನಂದಕರವಾದ ಮತ್ತು ಆನಂದಕರವಲ್ಲದ ಸಂಗತಿಗಳನ್ನು ನಿಲ್ಲಿಸಿಬಿಡುತ್ತದೆ.

---

*"ಜೀವ"* (zoe) *ಇದನ್ನು ವಿರಿಸಲು ಉಪಯೋಗಿಸಲ್ಪಟ್ಟಿದೆ:*

1. ದೈಹಿಕ ಜೀವನ (ಅಪೊಸ್ತಲರ ಕೃತ್ಯ 17:25)
2. ಜೀವಿಸುವ ನಿಜವಾದ ಮಾರ್ಗ (ಲೂಕ 12:15; ನೋಡಿರಿ ರೋಮಾಪುರ 6:4; 8:6, 10; ಗಲಾತ್ಯ 2:20; 1 ಪೇತ್ರ 3:10; 2 ಪೇತ್ರ 1:3)
3. ಆತ್ಮಿಕ ಜೀವನ (ಯೋಹಾನ 10:10; 1 ಯೋಹಾನ 5:12) ಹೊಸದಾಗಿ ಹುಟ್ಟುವದರಿಂದ ತರುವಂಥದ್ದು ಮತ್ತು ಮರಣದಿಂದ ಅದು ಪರಿಣಾಮಗೊಳ್ಳದೇ ಇರುವುದರಿಂದ ನಿತ್ಯವಾದದ್ದೆಂದು ತಿಳಿಯಲ್ಪಟ್ಟದ್ದು
4. ಭವಿಷ್ಯದ ಜೀವನ (ಮತ್ತಾಯ 7:14; 18:8, 9; ಮಾರ್ಕ 10:30; ಯೋಹಾನ 5:29)
5. ಯೇಸು, ಜೀವನ ಮೂಲ (ಯೋಹಾನ 1:4; 14:6)

---

*"ಮರಣ"* (thanatos) *ಇದರ ಬಗ್ಗೆ ಉಪಯೋಗಿಸಲ್ಪಟ್ಟಿದೆ*

1. ದೈಹಿಕ ಮರಣ (ಮತ್ತಾಯ 20:18; ಲೂಕ 2:26)
2. ದುಷ್ಟ ಜೀವಿತ (ರೋಮಾಪುರ 8:6; 1 ತಿಮೊಥೆ 5:6)
3. ಪಾಪದಲ್ಲಿ ಆತ್ಮಿಕವಾಗಿ ಮರಣ ಹೊಂದಿರುವುದು (ಕೊಲೊಸ್ಸೆ 2:13) ಮತ್ತು ದೇವರಿಂದ ಬೇರ್ಪಡಿಸಲ್ಪಟ್ಟದ್ದು (ಯೆಶಾಯ 59:1, 2; ಎಫೆಸ 2:11-13), ತಪ್ಪಿಹೋದ ಮಗನಂತೆ, ತನ್ನ ತಂದೆಯಿಂದ ಬೇರೆಯಾದದ್ದು ಸತ್ತಂತೆ ಎಂದು ಯೋಚಿಸಲ್ಪಟ್ಟಿದೆ (ಲೂಕ 15:24)
4. ಪಾಪಭರಿತ ಜೀವಿತಕ್ಕೆ ನಾವಿನ್ನು ಜೀವಿಸದೇ ಇರುವದರಿಂದ ಶಾಪಕ್ಕೆ ಆತ್ಮಿಕವಾಗಿ ಸತ್ತು ಹೋದವರಾಗಿದ್ದೇವೆ (ರೋಮಾಪುರ 6:1-6)
5. ಎರಡನೆಯ ಮರಣ, ಬೆಂಕಿಯ ಕೆರೆಯಾಗಿದೆ (ಪ್ರಕಟನೆ 2:11; 20:14)

---

ದೈಹಿಕ ಜೀವ ಮತ್ತು ಮರಣವು ಫಿಲಿಪ್ಪಿ 1:20ರಲ್ಲಿ ಒಂದಕ್ಕೊಂದು ವಿರುದ್ಧವಾಗಿ ಹೇಳಲ್ಪಟ್ಟಿವೆ. ಒಂದೇ ಸಮಯದಲ್ಲಿ ಎರಡೂ ನಮಗಿರಲಾರವು. ಗರ್ಭಧಾರಣೆಯ ಸಮಯದಲ್ಲಿ ನಮಗೆ ಜೀವಕೊಡಲ್ಪಟ್ಟಿದೆ. ಮರಣದ ಮುಖಾಂತರವಾಗಿ ನಾವು ಈ ಲೋಕವನ್ನು ಬಿಟ್ಟು ಹೋಗುತ್ತೇವೆ.

ಮರಣವು ಪಾಪದ ಪರಿಣಾಮವಾಗಿದೆ (ರೋಮಾಪುರ 5:12). ಸೈತಾನನು ಕೊಲೆಗಾರನಾಗಿದ್ದಾನೆ (ಯೋಹಾನ 8:44); ಪಾಪ ಮಾಡಲಿಕ್ಕೆ ನಮ್ಮನ್ನು ಶೋಧಿಸುವುದರಿಂದ, ಅವನಿಗೆ ಮರಣದ ಅಧಿಕಾರವಿರುತ್ತದೆ. ಯೇಸುಕ್ರಿಸ್ತನು, "ಮರಣದಿಂದಲೇ ಮರಣಾಧಿಕಾರಿಯನ್ನು, ಅಂದರೆ ಸೈತಾನನನ್ನು ಅಡಿಗಿಸಿ ಬಿಡುವದಕ್ಕೂ, ಮರಣಭಯದ ದೆಸೆಯಿಂದ ತಮ್ಮ ಜೀವಮಾನದಲ್ಲೆಲ್ಲಾ ದಾಸತ್ವದೊ ಳಗಿದ್ದವರನ್ನು ಬಿಡಿಸುವದಕ್ಕೂ ಅವರಂತೆ ರಕ್ತ ಮಾಂಸಧಾರಿಯಾದನು" (ಇಬ್ರಿಯ 2:14, 15; ನೋಡಿರಿ 1 ಥೆಸಲೊನೀಕ

3:5; 2 ತಿಮೊಥೆ 2:26). ಪಾಪದ ಮೂಲಕ ಮರಣವು ಸೈತಾನನ ಕಾರ್ಯವಾಗಿದೆ, ನೀತಿಯ ಮುಖಾಂತರ ಜೀವವು ಯೇಸುಕ್ರಿಸ್ತನ ಕಾರ್ಯದ ಪರಿಣಾಮವಾಗಿದೆ (ರೋಮಾಪುರ 5:17).

## ಮರಣದಲ್ಲಿ ಪ್ರಾಣ ಮತ್ತು ಆತ್ಮ

ದೇಹವು ಸಾಯುವಾಗ ಪ್ರಾಣ ಮತ್ತು ಆತ್ಮ ಸತ್ತುಹೋಗುವವೋ? ಮರಣಾನಂತರ ಜೀವಿಸುವದನ್ನು ಮುಂದುವರಿಸುವೆವೋ? "ಇದಲ್ಲದೆ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ; ಆತ್ಮ ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೇ ಹೆದರಿರಿ" ಎಂದು ಯೇಸು ಹೇಳಿದನು (ಮತ್ತಾಯ 10:28). ಒಬ್ಬನು ದೇಹವನ್ನು ಕೊಂದು ಪ್ರಾಣವನ್ನು ಕೊಲ್ಲಲಾರದವನಾಗಿದ್ದರೆ, ದೇಹವು ಸತ್ತುಹೋದರೂ ಪ್ರಾಣವು ಜೀವಿಸಲು ಶಕ್ತವಾಗಿರತಕ್ಕದ್ದು. ದೇಹಕ್ಕೆ ಮರಣವು ಬಂದಿತು ಎಂದರೆ ಆತ್ಮಕ್ಕೆ ಮರಣ ಬಂದಿತು ಎಂದು ಅರ್ಥವಾಗುವುದಿಲ್ಲ.

ರಾಹೇಲಳ ಪ್ರಾಣವು ಆಕೆಯ ದೇಹದೊಂದಿಗೆ ಸತ್ತು ಹೋಗಲಿಲ್ಲ; ಆಕೆ ಮರಣ ಹೊಂದಿದಾಗ ಅದು ಆಕೆಯ ದೇಹದಿಂದ ಅಗಲಿ ಹೋಯಿತು: "ಆದರೆ ರಾಹೇಲಳು ಸತ್ತು ಹೋದಳು; ಪ್ರಾಣ ಹೋಗುತ್ತಿರುವಾಗ ಆಕೆಯು ಆ ಮಗುವಿಗೆ ಬೆನೋನಿ ಎಂದು ಹೆಸರಿಟ್ಟಳು; ಆದರೆ ಅದರ ತಂದೆಯು ಅದಕ್ಕೆ ಬೆನ್ಯಾಮೀನ್ ಎಂದು ಹೆಸರಿಟ್ಟನು" (ಆದಿಕಾಂಡ 35:18). ಒಬ್ಬನು ಸಾಯುವಾಗ ಪ್ರಾಣವು ದೇಹವನ್ನು ಬಿಟ್ಟು ಹೋಗುತ್ತದೆ.

ಒಬ್ಬ ವಿಧವೆಯ ಮಗನ ಪ್ರಾಣವು ಅವನು ಜೀವಕ್ಕೆ ತಿರುಗಿ ತಂದಾಗ ಹಿಂದಿರುಗಿ ಬಂದಿತು. ಅವನನ್ನು ಜೀವಿಸುವಂತೆ ಮಾಡಲು, ಎಲೀಯನು, "ಹುಡುಗನ ಮೇಲೆ ಮೂರು ಸಾರಿ ಬೋರಲ ಬಿದ್ದು - ನನ್ನ ದೇವರಾದ ಯೆಹೋವನೇ, ಈ ಹುಡುಗನ ಪ್ರಾಣವು ತಿರಿಗಿ ಬರುವಂತೆ ಮಾಡು ಎಂಬುದಾಗಿ ಆತನಿಗೆ ಮೊರೆಯಿಟ್ಟನು. ಯೆಹೋವನು ಅವನ ಪ್ರಾರ್ಥನೆಯನ್ನು ಕೇಳಿದದರಿಂದ ಹುಡುಗನ ಪ್ರಾಣವು ತಿರಿಗಿ ಬಂದು ಅವನು ಉಜ್ಜೀವಿಸಿದನು" (1 ಅರಸು 17:21, 22; KJV). ಮರಣದ ಸಮಯದಲ್ಲಿ ಹುಡುಗನ ಪ್ರಾಣವು ಹೊರಟು ಹೋಗಿದ್ದಿರಬೇಕು. ಇಲ್ಲವೇ ಅವನಲ್ಲಿ ಪುನಃ ಬಂದಿರಲಿಕ್ಕಿದ್ದಿಲ್ಲ.

ಮರಣದಲ್ಲಿ ಪ್ರಾಣವು ದೇಹವನ್ನು ಬಿಟ್ಟು ಹೋಗುತ್ತಿತೆಂದು ನಾವು ತಿಳಿಯುತ್ತೇವೆ. ಎಲೀಯನು ದೇವರಿಗೆ ತನ್ನ "ಪ್ರಾಣ"ವನ್ನು ತೆಗೆದು ಕೊಳ್ಳಬೇಕೆಂದು ಬೇಡಿಕೊಂಡನು (1 ಅರಸು 19:4; New World Translation) ಬೈಬಲಿನ ಅನೇಕ ಇಂಗ್ಲಿಷ್ ಅವೃತ್ತಿ ಗಳಲ್ಲಿ "ಜೀವ" ಎಂದು ಭಾಷಾಂತರಿಸಲ್ಪಟ್ಟಿದೆ. ಮರಣದಲ್ಲಿ ಪ್ರಾಣವು ದೇಹವನ್ನು ಬಿಟ್ಟುಹೋಗುತ್ತದೆಂದು ನಾವು ಪುನಃ ನೋಡುತ್ತೇವೆ.

ಕೀರ್ತನೆ 16:8-11ರಲ್ಲಿಯ ದಾವೀದನ ಪ್ರವಾದನೆಯನ್ನು ನೆರವೇರಿಸುವದರಲ್ಲಿ, ಯೇಸುವಿನ ದೇಹವು ಕೊಳೆತು ಹೋಗಲಿಲ್ಲ ಮತ್ತು ಆತನ ಪ್ರಾಣವು ಪಾತಾಳ ಲೋಕದಲ್ಲಿ ಉಳಿಯಲಿಲ್ಲ. ಪಂಚಾಶತ್ತಮ ದಿನದಂದು ಪೇತ್ರನು ತನ್ನ ಪ್ರಸಂಗದಲ್ಲಿ ಯೇಸುವಿನ ಪುನರುತ್ಥಾನವನ್ನು ದೃಢಪಡಿಸಿ ತೋರಿಸಲು ಕೀರ್ತನೆ 16ನ್ನು ಉಪಯೋ ಗಿಸಿದನು (ಅಪೊಸ್ತಲರ ಕೃತ್ಯಗಳು 2:29-31). ಮರಣದಲ್ಲಿ ಆತನ ಪ್ರಾಣವು ಆತನ ದೇಹವನ್ನು ಬಿಟ್ಟು ಹೋಯಿತು, ಪಾತಾಳಕ್ಕೆ ಹೋಯಿತು ಮತ್ತು ಆತನು ಪುನರುತ್ಥಾನ ಹೊಂದಿದಾಗ ಹಿಂದಿರುಗಿ ಬಂದಿತು.

“ಈ ಹೊತ್ತು ರಾತ್ರಿ ನಿನ್ನ ಪ್ರಾಣವನ್ನು ನಿನ್ನ ಕಡೆಯಿಂದ ಕೇಳುವರು” (ಲೂಕ 12:20) ಎಂದು ಬುದ್ಧಿಯಿಲ್ಲದ ಐಶ್ವರ್ಯವಂತನಿಗೆ ಕೇಳಲ್ಪಟ್ಟಿತು. ಅವನ ಪ್ರಾಣವು ತೆಗೆಯಲ್ಪಡುವುದು ಮತ್ತು ಅವನಿಗೆ ಮರಣ ಬರುವುದು ಎಂಬುದು ಇದರ ಅರ್ಥವಾಗುತ್ತದೆ.

ಈ ಪರಿಶುದ್ಧ ಬರಹಗಳಿಂದ ಪ್ರಾಣವು ದೇಹದಿಂದ ಅಗಲಿ ಹೋಗುವಾಗ, ದೇಹವು ಸತ್ತು ಹೋಗುತ್ತದೆ ಎಂದು ನಾವು ತೀರ್ಮಾನಿಸಬಹುದು. ಪ್ರಾಣವು ದೇಹವನ್ನು ಬಿಡುವಾಗ ಅದು ಸಾಯುವದಿಲ್ಲ. ಅದೇ ರೀತಿಯಲ್ಲಿ ನಮ್ಮ ಆತ್ಮಗಳು ಸಹ ನಮ್ಮ ದೇಹಗಳನ್ನು ಬಿಟ್ಟು, ಅವುಗಳಿಂದ ಬೇರೆಯಾಗಿ ಜೀವಿಸುವದನ್ನು ಮುಂದುವರಿಸುವವು.

ಯೇಸುವು ಮರಣಹೊಂದಿದಾಗ, “ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸುತ್ತೇನೆ” ಎಂದು ಹೇಳುತ್ತ ತನ್ನಾತ್ಮವನ್ನು ತಂದೆಯ ಜೋಪಾನೆಯಲ್ಲಿ ಒಪ್ಪಿಸಿದನು (ಲೂಕ 23:46). ಯೇಸುವಿನ ದೇಹವು ಶಿಲುಬೆಯ ಮೇಲೆ ಸ್ವಲ್ಪ ಸಮಯವಿತ್ತು, ಆ ಮೇಲೆ ಹೂಣಲ್ಪಟ್ಟಿತು, ಆದರೆ ಆತನ ಆತ್ಮವು ದೇವರ ಜೋಪಾನೆಯೊಳಗೆ ಹೋಗಿತ್ತು.

ನಾವು ಜೀವಿಸುವಾಗ, ನಮ್ಮ ದೇಹಗಳ ಸಾಮರ್ಥ್ಯಕ್ಕೆ ತಕ್ಕಂತೆ ಸುತ್ತುಲೂ ತಿರುಗಳು ನಮಗೆ ಸ್ವಾತಂತ್ರ್ಯವಿರುತ್ತದೆ. ಪ್ರಾಣ ಮತ್ತು ಆತ್ಮ ದೇಹವನ್ನು ಬಿಡುವಾಗ ಅವುಗಳಿಗೆ ಇನ್ನು ಮುಂದೆ ಈ ದೈಹಿಕ ಚಲನೆಯಿರುವದಿಲ್ಲ. ದೇವರ ನಡಿಸುವಿಕೆಯ ಮೇಲೆ ಅವು ಅವಲಂಭಿಸಿರುತ್ತವೆ. ಅವರು ಪುನರುತ್ಥಾನ ಹೊಂದುವವರೆಗೆ ಅವರು ಪಾತಾಳ ಲೋಕದಲ್ಲಿ ಕಾದಿಡಲ್ಪಡುತ್ತಾನೆ.

## ಮುಕ್ತಾಯ

“ಮರಣ” ಮತ್ತು “ಜೀವ” ಎಂಬ ಮಾತುಗಳು ಅವುಗಳ ಹಿನ್ನೆಲೆಗಳಿಗೆ ಅನುಸಾರವಾಗಿ ಅರ್ಥಮಾಡಿಕೊಳ್ಳಲ್ಪಡ ಬೇಕು. ಮರಣದ ಬಾಗಿಲನ್ನು ನಾವು ದಾಟಿ ಹೋಗುವಾಗ, ಪ್ರಾಣ ಮತ್ತು ಆತ್ಮ ದೇಹವನ್ನು ಬಿಟ್ಟು ಹೋಗುವವು ಮತ್ತು ದೇಹವಿಲ್ಲದ ಸ್ಥಿತಿಯಲ್ಲಿ ಪ್ರವೇಶಿಸುವವು.

© 2009 Truth for Today